**ಸಾಕ್ಷಿಗೆ ದಿನಾಂಕಃ12-03-2026 ರಂದು ಪುನಃ ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.**

**:: ಮುಂದುವರೆದ ಪಾಟೀ ಸವಾಲು :: ಪ್ರತಿವಾದಿ ಪರ ಶ್ರೀ. TLP ವಕೀಲರಿಂದ ::**

ನಾನು ಐಟಂ 1 ನ್ನು 2014 ನೇ ಸಾಲಿನಲ್ಲಿ ವೈ ಎ ಕೃಷ್ಣಮೂರ್ತಿ ಎನ್ನುವವರಿಂದ ಖರೀದಿ ಮಾಡಿರುತ್ತೇನೆ ಎಂದರೆ ಸರಿ. ಸಾಕ್ಷಿಗೆ ಸದರಿ ಮಾರಾಟದ ಕ್ರಯಪತ್ರ ತೋರಿಸಲಾಗಿ ಸಾಕ್ಷಿ ಅದನ್ನು ನೋಡಿ ಒಪ್ಪಿದ ಕಾರಣ ಅದನ್ನು ನಿಡಿ1 ಎಂದು ಗುರುತಿಸಲಾಯಿತು. ನಿಡಿ1 ಕ್ಕೆ ಸಂಬಂಧಪಟ್ಟಂತೆ ಮೂಲ ಪ್ರತಿ ನನ್ನ ಬಳಿ ಇರುತ್ತದೆ ಎಂದರೆ ಸರಿ. ಅದನ್ನು ಇವರೆಗೂ ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. ದಾವಾ ಐಟಂ 2 ಐಟಂ 1 ರ ಹಿತ್ತಲಾಗಿರುತ್ತದೆ ಎಂದರೆ ಸರಿ. ದಾವಾ ಐಟಂ 2 ಕ್ಕೆ ಸಂಬಂಧಪಟ್ಟಂತೆ ನನ್ನ ಬಳಿ ಬೇರೆ ಕ್ರಯಪತ್ರ ಇರುತ್ತದೆ. ಸಾಕ್ಷಿಗೆ ಐಟಂ 2 ರ ಕ್ರಯಪತ್ರ ತೋರಿಸಲಾಗಿ ಸಾಕ್ಷಿ ಅದನ್ನು ನೋಡಿ ಗುರುತಿಸಿದ ಮೇರೆಗೆ ಅದನ್ನು ನಿಡಿ2 ಎಂದು ಗುರುತಿಸಲಾಯಿತು. ನಿಡಿ2 ರ ಅಡಿಯಲ್ಲಿ ನಾನು ಕೇವಲ ಐಟಂ 3 ನ್ನು ಖರೀದಿ ಮಾಡಿರುತ್ತೇನೆ ಎಂದರೆ ಸಾಕ್ಷಿಯ ಐಟಂ 2 ಮತ್ತು 3 ನ್ನು ಖರೀದಿ ಮಾಡಿರುತ್ತೇನೆ ಎಂದು ನುಡಿಯುತ್ತಾರೆ. ಐಟಂ 2 ಕ್ಕೆ ಸಂಬಂಧಪಟ್ಟಂತೆ ನಾನು ಇವರೆಗೂ ಯಾವುದೇ ಕ್ರಯಪತ್ರ ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. ದಾವಾ ಶೆಡ್ಯೂಲ್ ಸ್ವತ್ತುಗಳಿಗೆ ಸಂಬಂಧಪಟ್ಟಂತೆ ಆಗಿರುವ ಕ್ರಯಪತ್ರಗಳನ್ನು ಹಾಜರುಪಡಿಸದಿದ್ದಲ್ಲಿ ಮುಂದೆ ಹಾಜರುಪಡಿಸಲು ನನಗೆ ಯಾವುದೇ ತೊಂದರೆ ಇರುವುದಿಲ್ಲ. ಐಟಂ 1 ಕ್ಕೆ ಸಂಬಂಧಪಟ್ಟಂತೆ ಪ್ರತಿವಾದಿಯು ವೈ ಎ ಕ ೃಷ್ಣಮೂರ್ತಿ ರವರ ವಿರುದ್ಧ ಅಸಲು ದಾವಾ 197/2015 ರಂತೆ ದಾವೆ ನಿರ್ದಿಷ್ಟ ಪರಿಹಾರ ಡಿಕ್ರಿ ಕೋರಿ ದಾವೆ ಸಲ್ಲಿಸಿದ್ದರು ಎಂದರೆ ನನಗೆ ತಿಳಿದಿರುತ್ತದೆ. ಐಟಂ 3 ಕ್ಕೆ ಸಂಬಂಧಪಟ್ಟಂತೆ ಪ್ರತಿವಾದಿಯು ಅಸಲು ದಾವಾ 257/2015 ರಂತೆ ದಾವೆ ಹೂಡಿರುವ ವಿಚಾರ ನನಗೆ ತಿಳಿದಿರುವುದಿಲ್ಲ. ಐಟಂ 1 ಕ್ಕೆ ಸಂಬಂಧಪಟ್ಟಂತೆ ವೈ ಎ ಕ ೃಷ್ಣಮೂರ್ತಿ ರವರು ದಿಃ 31.10.2014 ಕ್ರಯ ಕರಾರು ಪತ್ರದ ಅಡಿ ಸದರಿ ಸ್ವತ್ತನ್ನು ಪ್ರತಿವಾದಿಯ ಪರ ಮಾರಾಟ ಮಾಡಲು ಪತ್ರ ವ್ಯವಹಾರ ಮಾಡಿಕೊಂಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. 30.08.1985 ರಂದು ಪ್ರತಿವಾದಿಯ ಪರವಾಗಿ ಶಾರದಮ್ಮ ರವರು ದಾವಾ ಐಟಂ 3 ಕ್ಕೆ ಸಂಬಂಧಪಟ್ಟಂತೆ ಕ್ರಯ ಕರಾರು ಪತ್ರ

ಮಾಡಿಕೊಟ್ಟಿರುವ ವಿಚಾರ ನನಗೆ ಗೊತ್ತಿಲ್ಲ. ಸದರಿ ಕ್ರಯ ಕರಾರು ಪತ್ರದ ಆಧಾರದಲ್ಲಿ ಪ್ರತಿವಾದಿಯು ಶಾರದಮ್ಮ ರವರ ಕುಟುಂಬದವರ ಮೇಲೆ ಅಸಲು ದಾವಾ 257/2015 ರಂತೆ ದಾವೆ ಹೂಡಿರುವ ವಿಚಾರ ನನಗೆ ಗೊತ್ತಿಲ್ಲ. ಸದರಿ ದಾವೆಯು ನಂತರದಲ್ಲಿ ಡಿಕ್ರಿ ಆಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ದಾವಾ ಸ್ವತ್ತಿನ ಪಕ್ಕದಲ್ಲಿ ಇರುವ ಕಮಲ್ಲಮ್ಮ ರವರು ಶಾರದಮ್ಮ ರವರ ಕುಟುಂಬದವರ ಮೇಲೆ ಅಸಲು ದಾವಾ 2/1994 ರಂತೆ ದಾವೆ ಸಲ್ಲಿಸಿ ಅದು ಡಿಕ್ರಿ ಆಗಿರುವ ವಿಚಾರ ನನಗೆ ಗೊತ್ತಿಲ್ಲ. ಸದರಿ ಕಮಲ್ಲಮ್ಮ ರವರು ಶಾರದಮ್ಮ ರವರ ಕುಟುಂಬದವರ ವಿರುದ್ದ ಗ್ರಾ ಪಂ ಗೆ ನೀಡಿರುವ ಹಲವಾರು ಅರ್ಜಿಗಳ ಬಗ್ಗೆ ನನಗೆ ಗೊತ್ತಿಲ್ಲ. ನಾನು 2006 ರಿಂದ 2008 ರವರೆಗೆ ಗ್ರಾಮ ಪಂಚಾಯಿತಿ ಅಧ್ಯಕ್ಷನಾಗಿರುತ್ತೇನೆ. ನಾನು 1995-2015 ವರೆಗೂ ಗ್ರಾ ಪಂ ಸದಸ್ಯನಾಗಿದ್ದೆ.

ದಿಃ 10.09.2015 ರಂದು ಪ್ರತಿವಾದಿಯು ನೀಡಿದ್ದ ಅರ್ಜಿಯ ಆಧಾರದಲ್ಲಿ ಅಜ್ಜಂಪುರ ಗ್ರಾ ಪಂ ಯಲ್ಲಿ ಠರಾವು ಆಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಸಾಕ್ಷಿಗೆ ಒಂದು ಗ್ರಾ ಪಂ ಠರಾವು ತೋರಿಸಲಾಗಿ ಅದನ್ನು ನೋಡಿ ಒಪ್ಪಿದ ಕಾರಣ ಅದನ್ನು ನಿಡಿ3 ಎಂದು ಗುರುತಿಸಲಾಯಿತು. ದಿ ಃ23.06.2015 ರಂದು ಪ್ರತಿವಾದಿಯು ಐಟಂ 3 ಕ್ಕೆ ಸಂಬಂಧಪಟ್ಟಂತೆ ಪಂಚಾಯಿತಿಗೆ ತಕರಾರು ಅರ್ಜಿ ನೀಡಿದ್ದರು ಎಂದರೆ ನನಗೆ ಗೊತ್ತಿಲ್ಲ. ದಾವಾ ಶೆಡ್ಯೂಲ್ ಸ್ವತ್ತುಗಳಿಗೆ ಸಂಬಂಧಪಟ್ಟಂತೆ ನಾನು ಖಾತೆ ಮಡಿಸಿಕೊಳ್ಳುವ ಸಮಯದಲ್ಲಿ ಯಾವುದೇ ತಕರಾರು ಇರುವುದಿಲ್ಲ. ನನ್ನ ಹೆಸರಿಗೆ ದಾವಾ ಶೆಡ್ಯೂಲ್ ಸ್ವತ್ತುಗಳ ಖಾತೆ ಮಾಡಿಸಿಕೊಳ್ಳುವ ಸಮಯದಲ್ಲಿ ನಾನು ಗ್ರಾ ಪಂ ಸದಸ್ಯನಾಗಿದ್ದೆ ಎಂದರೆ ಸರಿ. ಆದಕಾರಣ ನನ್ನ ಪ್ರಭಾವ ಬೀರಿ ಆ ರೀತಿ ಖಾತೆ ನನ್ನ ಹೆಸರಿಗೆ ಮಾಡಿಸಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ದಾವಾ ಶೆಡ್ಯೂಲ್ ಸ್ವತ್ತುಗಳನ್ನು 718/733 ಎ, ಬಿ ಹಾಗೂ ಸಿ ರಂತೆ ಮೂರು ಭಾಗಗಳಾಗಿ ಖಾತೆ ಆಗಿರುತ್ತದೆ ಎಂದರೆ ಸರಿ. ದಾವಾ ಐಟಂ 1 ಮತ್ತು 2 ಕ್ಕೆ ಸಂಬಂಧಪಟ್ಟಂತೆ ನಿಪಿ12 ರ ಪ್ರಕಾರ ಒಂದೇ assessment ನಮೂದು ಇರುತ್ತದೆ ಎಂದರೆ ಸರಿ. ನಿಪಿ13 ದಾಖಲಾತಿಯು ಐಟಂ 3 ರ Assessment extract ಆಗಿರುತ್ತದೆ ಎಂದರೆ ಸರಿ. ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿರುವ ದಾಖಲಾತಿಗಳಲ್ಲಿ ದಾವಾ ಶೆಡ್ಯೂಲ್ ಸ್ವತ್ತುಗಗಳ ಕ್ರಯಪತ್ರಗಳು ಇರುವುದಿಲ್ಲ ಎಂದರೆ ಸರಿ. ಸಾಕ್ಷಿಯು ಮುಂದುವರೆದು ಅದನ್ನು ನನ್ನ ವಕೀಲರಿಗೆ ನೀಡಿರುತ್ತೇನೆ. ದಾವಾ ಐಟಂ 1 ರಿಂದ 3 ಕ್ಕೆ

ಸಂಬಂಧಪಟ್ಟಂತೆ ಪ್ರತಿವಾದಿಗಳು ನ್ಯಾಯಾಲಯದಿಂದ ಡಿಕ್ರಿ ಪಡೆದಿರುತ್ತಾರೆ ಎಂದರೆ ಸರಿಯಲ್ಲ. ಪ್ರತಿವಾದಿ ಹೂಡಿರುವ ದಾವೆಗೆ ಸಂಬಂಧಪಟ್ಟಂತೆ ಪತ್ರಿಕಾ ಪ್ರಕಟಣೆ ಇದ್ದ ವಿಚಾರ ನನಗೆ ಗೊತ್ತಿಲ್ಲ. ಸದರಿ ದಾವೆಗಳ ಬಗ್ಗೆ ನನಗೆ ಶಾರದಮ್ಮ ರವರ ಕುಟುಂಬದವರು ತಿಳಿಸಿರುವುದಿಲ್ಲ. ಅಸಲು ದಾವಾ 197/2015 ದಾವೆ ಹೂಡಿದ ನಂತರದಲ್ಲಿ ವೈ ವಿ ಸುಬ್ರಹ್ಮಣ್ಯ ರವರ ಮುಖಾಂತರ ನಾನು ಸಿ ಮಿಸ್ 8/2022 ರಂತೆ ಮತ್ತೊಂದು ಪ್ರಕರಣ ಹೂಡಿಸಿರುತ್ತೇನೆ ಎಂದರೆ ಸರಿಯಲ್ಲ. ನಾನೇ ವೈಯಕ್ತಿಕವಾಗಿ ಸದರಿ ಪ್ರಕರಣ ಹೂಡಿಸಿರುತ್ತೇನೆ ಎಂದು ಸದರಿ ಪ್ರಕರಣದಲ್ಲಿ ವೈ ವಿ ಸುಬ್ರಹ್ಮಣ್ಯ ರವರು ತಿಳಿಸಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಅಸಲು ದಾವಾ 257/2015 ದಾವೆಯು ನನಗೆ ಬಂಧನಕಾರಿಯಾಗುವುದಿಲ್ಲ ಎಂದು ನಾನು ಯಾವುದೇ ದಾವೆ ಇವರೆಗೂ ಸಲ್ಲಿಸಿರುವುದಿಲ್ಲ ಎಂದರೆ ಸರಿ. ನನಗೆ ಪ್ರತಿವಾದಿಗಳ ಪರ ಆಗಿರುವ ಕರಾರು ಪತ್ರಗಳ ಬಗ್ಗೆ ಹಾಗೂ ಅವರ ಪರವಾಗಿರುವ ಡಿಕ್ರಿಗಳ ಬಗ್ಗೆ ತಿಳಿದಿದ್ದರೂ ಶಾರದಮ್ಮ ರವರ ಕುಟುಂಬದವರ ಜೊತೆ ಶಾಮಿಲಾಗಿ ಸುಳ್ಳು ಕ್ರಯ ಮಾಡಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ದಾವಾ ಶೆಡ್ಯೂಲ್ ಸ್ವತ್ತಿನ ಮೇಲೆ ಸುಮಾರು ವ್ಯಾಜ್ಯಗಳು ಇದ್ದರೂ ಸಹ ಮತ್ತು ಸದರಿ ವಿಚಾರ ನನಗೆ ತಿಳಿದಿದ್ದರೂ ಸಹ ಆ ರೀತಿ ಸುಳ್ಳಾಗಿ ಅಕ್ರಮ ಲಾಭ ಪಡೆಯಲು ಕ್ರಯಪತ್ರ ಮಾಡಿಕೊಂಡಿರುತ್ತೇನೆ ಎಂದರೆ ಸರಿಯಲ್ಲ.

ಅಸಲು ದಾವಾ 197/2015 ರಲ್ಲಿ ಆಗಿರುವ ಡಿಕ್ರಿ ನನ್ನ ಕ್ರಯಪತ್ರವಾದ 2 ವರ್ಷದ ನಂತರ ತಿಳಿದು ಬಂದಿರುತ್ತದೆ. ಅಸಲು ದಾವಾ 257/2015 ರಲ್ಲಿ ಆಗಿರುವ ಡಿಕ್ರಿಯ ವಿಚಾರ ನನಗೆ 2018-19 ರಲ್ಲಿ ತಿಳಿದು ಬಂದಿರುತ್ತದೆ. ತಕ್ಷಣದಲ್ಲಿ ಸದರಿ ವಿಚಾರವನ್ನು ವೈ ವಿ ಕೃಷ್ಣಮೂರ್ತಿ ರವರಿಗೆ ತಿಳಿಸಿರುತ್ತೇನೆ ಮತ್ತು ನಾನು ನನ್ನ ವಕೀಲರನ್ನು ಭೇಟಿ ಮಾಡಿರುತ್ತೇನೆ. ಸದರಿ ವಿಚಾರದ ಬಗ್ಗೆ ವೈ ವಿ ಕೃಷ್ಣಮೂರ್ತಿ ರವರಿಗೆ ನಾನು ಯಾವುದೇ ದಾವೆ ಅಥವಾ ತಕರಾರು ಸಲ್ಲಿಸಲು ತಿಳಿಸಿರುವುದಿಲ್ಲ ಆದರೆ ಅವರು ಸಹ ಆ ಸಮಯದಲ್ಲಿ ನನ್ನ ವಕೀಲರನ್ನು ಭೇಟಿ ಮಾಡಿರುತ್ತಾರೆ ಮತ್ತು ನಂತರದಲ್ಲಿ ನಾನು ಈ ದಾವೆ ಹೂಡಿರುತ್ತೇನೆ. ವೈ ವಿ ಕೃಷ್ಣಮೂರ್ತಿ ರವರು ಆಗಿರುವ ಡಿಕ್ರಿಗಳ ಬಗ್ಗೆ ಯಾವ ಕ್ರಮ ತೆಗೆದುಕೊಂಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ.

ನನಗೆ ದಾವಾ ಆಸ್ತಿಗಳ ಬಗ್ಗೆ ಕ್ರಯ ಕರಾರು ಪತ್ರ ಹಾಗೂ ಡಿಕ್ರಿ ಆಗಿದ್ದ ವಿಚಾರ ನನಗೆ ಸಂಪೂರ್ಣವಾಗಿ ತಿಳಿದಿದ್ದರೂ ಕ್ರಯಪತ್ರವನ್ನು ಮಾಡಿಕೊಂಡು ನ್ಯಾಯಾಲಯದಲ್ಲಿ ಸುಳ್ಳು

ಸಾಕ್ಷ್ಯವನ್ನು ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ಈ ದಾವೆಯಲ್ಲಿ ಕೇಳಿರುವ ಪರಿಹಾರಕ್ಕೆ ನಾನು ಅರ್ಹನಾಗಿರುವುದಿಲ್ಲ ಎಂದರೆ ಸರಿಯಲ್ಲ.

**<u>:: ಮರು ವಿಚಾರಣೆ ಇಲ್ಲ ::</u>**

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು).

ಓ ಹೇ ಕೇ ಸ ಇ ಎ ಒ

sd/-

ಪ್ರ.ಸಿ.ಜೆ ಮತ್ತು ಜೆ.ಎಂ.ಎಫ್.ಸಿ, ತರೀಕೆರೆ

(ಸಂಚಾರಿ ನ್ಯಾಯಾಲಯ ಅಜ್ಜಂಪುರ)

ಸಾಕ್ಷಿಯ ಸಹಿ: